ಪರೀಕ್ಷೆ ಮಾಡೋಣವೆಂದು ನಿರ್ಧರಿಸಿದ. ನಿರ್ಧಾರ ಗಟ್ಟಿಯಾದ ಮೇಲೆ ನಿದ್ರಾದೇವಿ ರಾಜನನ್ನು ಆವರಿಸಿದಳು.

ಮರುದಿನ ನಸುಕು ನಿಶೆಯ ಬಿಡಿದೋಡಿಸುವ ಮುನ್ನ ಬೇಗ ಎದ್ದು ರಾಜ ಮಾರುವೇಷದಲ್ಲಿ ಒಬ್ಬನೇ ಪಟ್ಟಣದ ಹೊರಗೆ ಬಂದು ತನ್ನ ಯೋಜನೆಯಂತೆ ಆಯಕಟ್ಟಿನ ಸ್ಥಾನದಲ್ಲಿ ಅವಿತು ಕುಳಿತು ಜನರನ್ನು ಗಮನವಿಟ್ಟು ನೋಡಲಾರಂಬಿಸಿದ.

ಮೊದಲನೆಯ ಗುಂಪು ಆಸ್ಥಾನದ ವಿದ್ವಾಂಸರ ಗುಂಪು ದಾರಿಯಲ್ಲಿ ಸಾಗಿತ್ತು. ಸ್ವಲ್ಪ ದೂರದಲ್ಲಿ ದಾರಿಗೆ ಅಡ್ಡಲಾಗಿ ಕಲ್ಲು ಬಿದ್ದಿತ್ತು. ಅದನ್ನು ನೋಡಿದ ಅವರು 'ಯಾವನೋ ಜವಾಬ್ದಾರಿ ಇಲ್ಲದವ ದಾರಿಗೆ ಕಲ್ಲು ಬೀಳಿಸಿ ಹೋಗಿದ್ದಾನೆ. ಇಂದು ಆಸ್ಥಾನದಲ್ಲಿ ರಾಜರಿಗೆ ದೂರು ನೀಡಬೇಕು' ಎಂದು ಹೇಳುತ್ತಾ ಕಲ್ಲನ್ನು ಸುತ್ತಿಕೊಂಡು ಮುಂದೆ ಹೋದರು.

ಸ್ವಲ್ಪ ಹೊತ್ತಿನಲ್ಲೆ ವರ್ತಕರ ಗುಂಪು ವ್ಯಾಪಾರಕ್ಕೆಂದು ಹೊರಟಿದ್ದು ಮಾರ್ಗದ ಮಧ್ಯದಲ್ಲಿ ಬಿದ್ದಿದ್ದ ಕಲ್ಲನ್ನು ನೋಡಿ 'ನಮ್ಮ ರಾಜ ನಮ್ಮಿಂದ ತೆರಿಗೆ ಕಟ್ಟಿಸಿ ಕೊಳ್ಳುತ್ತಾನೇ ಹೊರತು ರಾಜ್ಯದಲ್ಲಿ ಏನು ನಡೆಯುತ್ತದೆ ಎಂದು ನೋಡದೆ ಅರಮನೆಯಲ್ಲಿ ಕಣ್ಣು ಮುಚ್ಚಿ ಕುಳಿತಿದ್ದಾನೆ, ಭೋಗಲಾಲಸೆಯಲ್ಲಿ ಮುಳುಗಿದ್ದಾನೆ. ಹಿಂತಿರುಗಿ ಬಂದ ಮೇಲೆ ಆಸ್ಥಾನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲೇಬೇಕು' ಎಂದು ತಮ್ಮಲ್ಲೆ ಮಾತಾಡಿಕೊಂಡು ಕಲ್ಲನ್ನು ಸುತ್ತಿಕೊಂಡು ಮುಂದೆ ಹೋದರು.

ಇನ್ನೇನು ತಾನು ಅರಮನೆಗೆ ಹೊರಡಲು ನಿರ್ಧರಿಸಿ ಸಿದ್ಧನಾದಾಗ ಹತ್ತಿರದಲ್ಲಿ ರೈತನೊಬ್ಬ ಹೆಗಲ ಮೇಲೆ ಮೂಟೆಯೊಂದನ್ನು ಹೊತ್ತು ಬರುವುದು ಕಾಣಿಸಿತು. ಸರಿ ಇವನೊಬ್ಬನ ನಡವಳಿಕೆ ನೋಡಿ ಹೋಗೋಣವೆಂದು ಮತ್ತೆ ಅವಿತು ಕುಳಿತ ರಾಜ ರಾಜೇಂದ್ರ.

ಭಾರ ಹೊತ್ತಿದ್ದರಿಂದ ನಿಧಾನವಾಗಿ ನಡೆದು ಬಂದವನು ಮಾರ್ಗದ ಮಧ್ಯ ಬಿದ್ದಿದ್ದ ಕಲ್ಲನ್ನು ನೋಡಿದ. ಹೆಗಲಮೇಲಿದ್ದ ಮೂಟೆಯನ್ನು ಅಲ್ಲೇ ಇಳಿಸಿ ಹೀಗೆಂದ 'ದಾರಿಹೋಕರಿಗೆ ಎಷ್ಟು ತೊಂದರೆ ಇದರಿಂದ. ಸದ್ಯ ನಾನು ಇಲ್ಲಿ ಬಂದದ್ದು ಒಳ್ಳೆಯದೆ ಆಯಿತು ಪಕ್ಕಕ್ಕೆ ಸರಿಸೋಣ. ಯಾರಾದರೂ ನೋಡಿದರೆ ನಮ್ಮ ರಾಜ್ಯದ ಬಗ್ಗೆ ನಮ್ಮ ರಾಜನ ಬಗ್ಗೆ ಏನೆಂದಾರು?' ಎನ್ನುತ್ತಾ ಕಲ್ಲನ್ನು ತಳ್ಳಲು ಪ್ರಯತ್ನಿಸಿದ. ಭಾರವಾದ ಕಲ್ಲನ್ನು ಪಕ್ಕಕ್ಕೆ ಸರಿಸುವುದು ಸುಲಭದ ಕೆಲಸವಾಗಿರಲಿಲ್ಲ. ಮರು ಯತ್ನದಲ್ಲಿ ಕಲ್ಲನ್ನು ದಾರಿಯ ಬದಿಗೆ ಸರಿಸಿ ಮಾರ್ಗವನ್ನು ಸರಿಪಡಿಸಿದ. ಕಲ್ಲಿನ ಅಡಿಯಲ್ಲಿ ಒಂದು ಹಣದ ಚೀಲ ಸಿಕ್ಕಿತು. ತೆರೆದು ನೋಡಿದಾಗ ಅದರ ತುಂಬಾ ಬಂಗಾರದ ನಾಣ್ಯಗಳಿದ್ದವು. ಜೊತೆಯಲ್ಲೆ ಒಂದು ಪತ್ರವಿತ್ತು. ಅಲ್ಪ ಸ್ವಲ್ಪ ಓದು ಬರಹ ಕಲಿತಿದ್ದ ರೈತ ನಿಧಾನವಾಗಿ ಓದಿದ.

'ಮಿತ್ರನೆ ಇದು ಮಾರ್ಗದ ಮಧ್ಯ ಇದ್ದ ಕಲ್ಲನ್ನು ಮಾರ್ಗದಿಂದ ತೆಗೆದಿದ್ದಕ್ಕೆ ನಿನಗೆ ನಿಮ್ಮ ರಾಜನ ಪುಟ್ಟ ಕಾಣಿಕೆ ಸ್ವೀಕರಿಸು' ಎಂದು ಬರೆದು ರಾಜ ಮುದ್ರೆಯನ್ನು ಹಾಕಲಾಗಿತ್ತು. ಅದನ್ನು ಓದಿದ ರೈತನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಸಂತಸದಿಂದ ನಾಣ್ಯಗಳ ಚೀಲವನ್ನು ತನ್ನ ಜೇಬಿನಲ್ಲಿಟ್ಟುಕೊಂಡು ಮೂಟೆಯನ್ನು ಹೊತ್ತು ಮುನ್ನಡೆಯಲು ಅಣಿಯಾದನು. ಆಗ ಅವಿತುಕೊಂಡಿದ್ದ ರಾಜ ಬಂದು ರೈತನ ಬಗೆ ಹರ್ಷಗೊಂಡು ಅವನಿಗೆ ಅಭಿನಂದನೆ ಸಲ್ಲಿಸಿ ತಾನು ಈ ರಾಜ್ಯದ ರಾಜ ರಾಜೇಂದ್ರನೆಂದು ರೈತನ ಈ ನಡೆ ಮಾದರಿಯಾಗಿದೆ ಎಂದು ಕೊಂಡಾಡಿ ಅರಮನೆಯತ್ತ ನಡೆದನು.

ಮಂತ್ರಿ ಚತುರದೇವನ್ನು ಕರೆಸಿ ಅತನ ಮಾತನ್ನು ಇಂದು ಪರೀಕ್ಷಿಸಿದ್ದಾಗಿ ನಡೆದ ಘಟನೆಯನ್ನು ವಿವರಿಸಿದನು. ನಮ್ಮ ರಾಜ್ಯಕ್ಕೆ ಹೆಸರು ತರುರುವವರು ನಮ್ಮ ನಾಡಿನ ಸಾಮಾನ್ಯ ಜನರು, ಆಸ್ಥಾನ ವಿದ್ವಾಂಸರಾಗಲಿ, ವ್ಯಾಪಾರಸ್ಥರಾಗಲಿ ಅಲ್ಲ. ಹಾಗಾಗಿ ಸಕಲ ಸವಲತ್ತುಗಳನ್ನು ಸಾಮಾನ್ಯರಿಗೆ ಹೆಚ್ಚು ತಲುಪಿಸಿ ಎಂದು ಆದೇಶ ನಿಡಿದನು. ಇನ್ನು ಮೇಲೆ ನಮ್ಮ ರಾಜ್ಯ ಯಾವಾಗಲೂ ಸಾಮಾನ್ಯರಿಗಾಗಿ ಶ್ರಮಿಸಲಿ ಎಂದನು. ■



# ನಮ್ಮ ಮನೆ ಅಂದ

■ **ರಾಜಶೇಖರ ಕುಕ್ಕುಂದಾ**

ಕಲೆ: ಸಂತೋಷ್ ಸಸಿಹಿತ್ಲು

ಮುದ್ದು ಮಾಡೋ ಅಮ್ಮ
ಶುದ್ಧ ಕಾಡೋ ಅಪ್ಪ
ನಮ್ಮ ಮನೆ ಅಂದ
ಆಹಾ! ಎಷ್ಟು ಚಂದ!

ಪಾಠ ತಿಳಿಸೋ ಅಣ್ಣ
ಆಟ ಕಲಿಸೋ ಅಕ್ಕ
ನಮ್ಮ ಮನೆ ಅಂದ
ಆಹಾ! ಎಷ್ಟು ಚಂದ!

ಮಾತು ಹೇಳೋ ಅಜ್ಜಿ
ಕೂತು ಕೇಳೋ ಅಜ್ಜ
ನಮ್ಮ ಮನೆ ಅಂದ
ಆಹಾ! ಎಷ್ಟು ಚಂದ!

ತಂಟೆಕೋರ ತಮ್ಮ
ಗಂಟುಮೋರೆ ತಂಗಿ
ನಮ್ಮ ಮನೆ ಅಂದ
ಆಹಾ! ಎಷ್ಟು ಚಂದ!

## ಕುಂಚ ಪ್ರಪಂಚ



**ಪಿ. ಸಾನ್ವಿ ಭಾರದ್ವಾಜ್**
7ನೇ ತರಗತಿ, ಸೌಂದರ್ಯ ಸೆಂಟ್ರೆಲ್ ಸ್ಕೂಲ್, ಬೆಂಗಳೂರು

